
# ಹೆಣದ ಹೂವು!





ಇದೊಂದು ದೊಡ್ಡ ಹೂವು. ಅಷ್ಟೇ ಅಲ್ಲ, ಇದು ಜಗತ್ತಿನಲ್ಲಿಯೇ ಅತಿ ಹೆಚ್ಚು ವಾಸನೆ ಬೀರುವ ಹೂವೂ ಕೂಡ! ಹಾಗೆಂದು ಮೂಗರಳಿಸಿ ಹೂವಿನ ಹತ್ತಿರ ಹೋಗಬೇಡಿ. ಇದು ಸುವಾಸನೆ ಹರಡುವ ಹೂವಲ್ಲ. ಇದರ ವಾಸನೆ ಕೊಳೆತ ಮಾಂಸದಂತಹುದು. ಜೊತೆಗೆ ಮೆಣಸಿನಕಾಯಿ ಮಾರುಕಟ್ಟೆಯ ಘಾಟು ವಾಸನೆಯೂ ಇದೆ. ಅದಕ್ಕೇ ಇರಬೇಕು, ಇದಕ್ಕೆ 'ಹೆಣದ ಹೂವು' ಎಂಬ ಅಡ್ಡ ಹೆಸರು. ಇದರ ನಿಜವಾದ ಹೆಸರು ಟೈಟನ್ ಎರಮ್. ಈ ಹೂವು ಅರಳಲು ನಿರ್ದಿಷ್ಟ ಸಮಯವಿಲ್ಲ. ಚಿತ್ರದಲ್ಲಿರುವ ಈ ಹೂವು, 75 ವರ್ಷಗಳ ನಂತರ ಅರಳಿದೆ ಎಂಬುದು ಸಸ್ಯಶಾಸ್ತ್ರಜ್ಞರ ಕುತೂಹಲಕ್ಕೆ ಕಾರಣವಾಗಿದೆ. ಸರಿಸುಮಾರು 10 ವರ್ಷಕ್ಕೊಮ್ಮೆ ಈ ಸಸ್ಯ ಹೂ ಬಿಡುವುದಂತೆ. ಆದರೆ ಅದೂ ಗ್ಯಾರಂಟಿ ಇಲ್ಲ. ಮನುಷ್ಯ ತನ್ನ ಜೀವಮಾನದಲ್ಲಿ ಒಮ್ಮೆ ಮಾತ್ರ ನೋಡಬಹುದಾದಂತಹ ಈ ಅಪರೂಪದ ಹೂವು ಅರಳಿದ್ದು ಸ್ವಿಝರ್ಲ್ಯಾಂಡ್‌ನ ಬಾಸೆಲ್ ವಿಶ್ವವಿದ್ಯಾಲಯದ ಆವರಣದಲ್ಲಿ. ಶುಭ ಶುಕ್ರವಾರದಂದು ಕಂಡ ಈ ಹೂವು ಈಸ್ಟರ್ ಸಂಡೇವರೆಗೆ ಪೂರ್ಣ ಅರಳಿ ನಗುತ್ತಿತ್ತು. ಎಂಟು ಅಡಿ ಎತ್ತರದ ಈ ಹೂವಿಗೆ, ಮೂರರಿಂದ ನಾಲ್ಕು ಅಡಿ ಅಗಲದ, ಕೊಡೆಯಾಕಾರದ ಪಕಳೆಗಳು. ಈ ಪಕಳೆಗಳು ಬೆಳೆಯುವ ವೇಗವೂ ಕುತೂಹಲಕಾರಿ. ಪ್ರತಿ ಗಂಟೆಗೆ ಕಾಲು ಅಂಗುಲದಷ್ಟು ವೇಗವಾಗಿ ಅವು ದೊಡ್ಡದಾಗುತ್ತವೆ. ಈ ಹೂವಿನ ತೂಕ 200 ಪೌಂಡ್. ಅಂದರೆ ಸುಮಾರು 91 ಕಿಲೋ! ಈ ಹೂವನ್ನು ನೋಡಿದವರು, ತೆಳ್ಳನೆಯ ಬಳಕುವ ಹೆಣ್ಣನ್ನು ಹೂವಿಗೆ ಹೋಲಿಸಲಿಕ್ಕಿಲ್ಲ!

ಇದರ ವಾಸನೆ ಅದರ ಸುತ್ತಮುತ್ತ ಸುಮಾರು ಅರ್ಧ ಮೈಲುಗಳಷ್ಟು ದೂರ ವ್ಯಾಪಿಸಿರುತ್ತದೆ. ಅದು ಹಗಲಿಗಿಂತ ರಾತ್ರಿ ವೇಳೆಯಲ್ಲಿ ಹೆಚ್ಚು ಗಾಢವಾಗಿರುತ್ತದೆ.

ಹಿಂದಿನ ಕಾಲದ ಸ್ತ್ರೀಯರು ಅನೇಕ ನಿಷೇಧಗಳಿಗೆ ಒಳಗಾಗಿದ್ದರು. ಅವರು ಕೆಲವು ಧಾರ್ಮಿಕ ಸ್ಥಳಗಳನ್ನು ಪ್ರವೇಶಿಸುವಂತಿರಲಿಲ್ಲ. ಧಾರ್ಮಿಕ ವಿಧಿವಿಧಾನಗಳಲ್ಲಿ ಪಾಲ್ಗೊಳ್ಳುವಂತಿರಲಿಲ್ಲ. ಹಾಗೆಯೇ ಈ ಹೆಣದ ಹೂವನ್ನು ನೋಡುವಂತಿರಲಿಲ್ಲ. ಏಕೆಂದರೆ, ಈ ಹೂವಿನ ರೂಪ ಪುರುಷ ಜನನಾಂಗವನ್ನು ಹೋಲುವಂತಿದೆ ಎಂಬ ಕಾರಣಕ್ಕಾಗಿ.

■ ಸುಭಾಸ ಯಾದವಾಡ

